ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-1, ಸಂಚಿಕೆ-3 ತ್ರೈಮಾಸಿಕ, ಜುಲೈ-ಸೆಪ್ಟೆಂಬರ್ 2014 ಪುಟಗಳು-12




ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಎಲ್ಲ ಹೋರಾಟಗಾರರಿಗೆ ಬೆಸ್ಕಾಂನ ನಮನ

- ಮಳೆಗಾಲದ ಸವಾಲುಗಳು
- ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸನ್ಸ್‌ದಾರರ ಷರತ್ತುಗಳು
- ಹಬ್ಬ–ರಾಷ್ಟ್ರೀಯ ಆಚರಣೆ

.....ಇನ್ನು ಹಲವು ವಿಷಯಗಳೊಂದಿಗೆ

# ಮಳೆ-ಗಾಳಿಯ ಸವಾಲನ್ನು ಬೆಸ್ಕಾಂ ತಂಡ ಎದುರಿಸಿದ ಕೆಲ ಚಿತ್ರಣಗಳು













# ವ್ಯವಸ್ಥಾಪಕ ನಿರ್ದೇಶಕರ ಸಂದೇಶ



**ಶ್ರೀ ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಸಹೋದ್ಯೋಗಿಗಳೆ,

ನಾವು ಮಳೆಗಾಲಕ್ಕೆ ಕಾಲಿಟ್ಟಿದ್ದು, ಮುಂದಿನ ಎರಡು ತಿಂಗಳುಗಳು ನಮ್ಮ ಪಾಲಿಗೆ ಹಲವಾರು ಸವಾಲುಗಳನ್ನು ತರಲಿವೆ. ಆಯಾ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಗಮನಿಸಬೇಕಾದದ್ದು ಇಷ್ಟೇ, ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದಲ್ಲಿ ಆದಷ್ಟು ಬೇಗ ವಿದ್ಯುತ್ ಸಂಪರ್ಕವನ್ನು ಪುನರ್ ಕಲ್ಪಿಸುವುದು ನಮ್ಮ ಪ್ರಥಮ ಆದ್ಯತೆಯಾಗಬೇಕು. ತುಂಡಾಗಿ ಬಿದ್ದ ತಂತಿಗಳನ್ನು ದುರಸ್ತಿಗೊಳಿಸಲು ವಿಳಂಬವಾದಲ್ಲಿ ಏರಿಯಲ್ ಬಂಚ್ ಕೇಬಲನ್ನು ಉಪಯೋಗಿಸಿ ವಿದ್ಯುತ್ ಸಂಪರ್ಕವನ್ನು ಶೀಘ್ರವಾಗಿ ಪುನರ್ ಕಲ್ಪಿಸುವುದು.

ಪರಿವರ್ತಕಗಳು ವಿಫಲಗೊಂಡಲ್ಲಿ, ಕೂಡಲೇ ಪರ್ಯಾಯ ಪರಿವರ್ತಕ ಲಭ್ಯವಾಗುವಂತೆ ಎಲ್ಲ ಉಪವಿಭಾಗಗಳ ಕಚೇರಿಗಳಲ್ಲಿ ಅಗತ್ಯ ವ್ಯವಸ್ಥೆಯನ್ನು ಮಾಡಲಾಗಿದೆ. ಅದೇ ರೀತಿ ತುರ್ತು ಕೆಲಸಕ್ಕೆ ಅನುಕೂಲವಾಗುವಂತೆ ಸಿಬ್ಬಂದಿಗಳಿಗೆ ಈಗಾಗಲೇ ಒದಗಿಸಿರುವ ಅಗತ್ಯ ಉಪಕರಣ, ಸಲಕರಣೆ ಹಾಗೂ ವಾಹನ ಸೌಲಭ್ಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದು.

ಮಳೆಯಿಂದಾಗಿ ನೆಲಕ್ಕುರುಳಿರುವ ಮರಗಳನ್ನು ತೆರವುಗೊಳಿಸಲು ಹಾಗೂ ವಿದ್ಯುತ್ ತಂತಿಯ ಮೇಲೆ ಹಾದುಹೋಗಿರುವ ರೆಂಬೆ/ಕೊಂಬೆಯ ಭಾಗಗಳನ್ನು ಸುಲಭವಾಗಿ ಕತ್ತರಿಸಲು ಅನುಕೂಲವಾಗುವಂತೆ ವಿದ್ಯುತ್ ಚಾಲಿತ ಗರಗಸ ಮತ್ತು ಉತ್ತಮ ಗುಣಮಟ್ಟದ ಸರ್ಚ್ ಲೈಟ್‌ಗಳನ್ನು ಖರೀದಿಸುವುದು ಹಾಗೂ ಅವಶ್ಯವಿದ್ದಲ್ಲಿ ಬಿ.ಬಿ.ಎಂ.ಪಿ ರವರ ಸಹಕಾರದೊಂದಿಗೆ ನೆಲಕ್ಕುರುಳಿರುವ ಮರಗಳನ್ನು ತೆರವುಗೊಳಿಸುವುದು.

ಧಾರಾಕರವಾದ ಮಳೆಯಿಂದಾಗಿ ವಿದ್ಯುತ್ ಸಮಸ್ಯೆಗಳು ಉಂಟಾದ ಸಂದರ್ಭದಲ್ಲಿ ವಿದ್ಯುತ್ ಪುನಃ ಸ್ಥಾಪನ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲು ಹಿರಿಯ ಅಧಿಕಾರಿಗಳು ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ಖುದ್ದು ಹಾಜರಿದ್ದು ಸಮಸ್ಯೆಗಳನ್ನು ಸರಿಪಡಿಸುವುದು.

ಇವೆಲ್ಲವುದರ ಮಧ್ಯೆ ನಿಮ್ಮ ಸುರಕ್ಷತೆಯನ್ನು ಕಡೆಗಣಿಸದಿರಿ. ನಿಮಗೆ ಒದಗಿಸಿರುವ ಸುರಕ್ಷಾ ಉಪಕರಣಗಳನ್ನು ಧರಿಸಿ ಕಾರ್ಯನಿರ್ವಹಿಸಿ. ಪ್ರತಿಯೊಬ್ಬ ಸಿಬ್ಬಂದಿಯೂ ಸಂಸ್ಥೆಯ ಅಮೂಲ್ಯ ಆಸ್ತಿ.

ನಾವೆಲ್ಲರೂ ಒಟ್ಟಾಗಿ ಕಾರ್ಯೋನ್ಮುಖವಾಗಿ ಮುಂಬರುವ ಸವಾಲುಗಳನ್ನು ಎದುರಿಸೋಣವೆಂದು ಆಶಿಸುತ್ತೇನೆ.

# ಸಂಪಾದಕೀಯ...



ಆತ್ಮೀಯರೇ,

ಬೇಸಿಗೆಯ ಬಿಸಿಲ ಧಗೆಯಿಂದ ತಂಪೆರೆವ ಮುಂಗಾರಿನತ್ತ ಹೊರಳುತ್ತಿದ್ದೇವೆ. ಮುಂಗಾರು ಮಳೆಯ ಆ ತಂಪು ವಾತಾವರಣ ತರುವ ಆಹ್ಲಾದ ಯಾರಿಗೆ ತಾನೆ ಹಿತವೆನಿಸುವುದಿಲ್ಲ. ಆದರೆ, ಆಹ್ಲಾದದ ಆನಂದದಲ್ಲಿ ನಾವು ಮೈಮರೆಯುವಂತಿಲ್ಲ.

ವಿದ್ಯುತ್ ಸರಬರಾಜು ಕಂಪನಿಯಲ್ಲಿರುವ ಎಲ್ಲರಿಗೂ ಮಳೆಗಾಲ ಎಂದರೆ ಒಂದು ಸವಾಲಿನ ಸಂದರ್ಭ. ಮಳೆ-ಗಾಳಿಯಿಂದ ಸ್ವಾಭಾವಿಕವಾಗಿ ಉಂಟಾಗುವ ವಿದ್ಯುತ್ ವ್ಯತ್ಯಯವನ್ನು ಸಮರ್ಪಕವಾಗಿ ನಿಭಾಯಿಸಿ ಗ್ರಾಹಕರಿಗೆ ಸುಗಮ ವಿದ್ಯುತ್ ಒದಗಿಸುವ ಜವಾಬ್ದಾರಿ ನಮ್ಮ ಮೇಲಿದೆ. ಮಳೆಗಾಲದಲ್ಲಿ ಎಲ್ಲಾ ವಿದ್ಯುತ್ ಮಾರ್ಗ ಹಾಗೂ ಪರಿವರ್ತಕಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ನಿರಂತರ ವಿದ್ಯುತ್ ಪೂರೈಸುವುದು ನಮ್ಮ ಕರ್ತವ್ಯವಾಗಿದೆ.

ಕೆಲವೊಮ್ಮೆ ನಮ್ಮ ಸಿಬ್ಬಂದಿ, ಅದರಲ್ಲೂ ವಿದ್ಯುತ್ ಮಾರ್ಗದಲ್ಲಿ ಕಾರ್ಯನಿರ್ವಹಿಸುವವರು ಅವರ ಜೀವದ ಹಂಗು ತೊರೆದು ಕಾರ್ಯನಿರ್ವಹಿಸುವಂತಹ ಕಠಿಣ ಸಂದರ್ಭಗಳು ಎದುರಾಗುತ್ತವೆ. ಅದಕ್ಕೂ ಎದೆಗುಂದದೆ ಕೆಲಸ ಮಾಡುವ ಸರ್ವರಿಗೂ ನಾವು ಎಲ್ಲ ರೀತಿಯ ಬೆಂಬಲವನ್ನು ನೀಡಬೇಕಾಗುತ್ತದೆ. ಇದಕ್ಕಾಗಿ "ಬೆಸ್ಕಾಂ"ನ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಕಲ ರೀತಿಯ ತ್ಯಾಗಕ್ಕೂ ಸಿದ್ಧರಾಗಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

ರಾಜ್ಯ ಸರ್ಕಾರದ ಒಂದು ವರ್ಷದ ಅವಧಿಯಲ್ಲಿ ಇಂಧನ ಇಲಾಖೆಯು ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಮ್ಮ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್ ಅವರು ಬೆಳಕು ಚೆಲ್ಲಿರುವುದು ತಮಗೆಲ್ಲ ತಿಳಿದಿರುವ ವಿಚಾರ. ನೂತನ "ಸೌರಶಕ್ತಿ ನೀತಿ 2014"ನ್ನು ಪ್ರಕಟಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ 7 ಗಂಟೆಗಳ ಕಾಲ ಮೂರು ಫೇಸ್‌ನ ಅಡಚಣೆರಹಿತ ವಿದ್ಯುತ್ ಸರಬರಾಜು, ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಯೋಜನೆಗಳ ಬಾಕಿ ಇದ್ದ 320 ಕೋಟಿ ವಿದ್ಯುತ್ ಬಿಲ್ ಪಾವತಿ ಮನ್ನಾ ಮಾಡಿರುವುದು ಇವೇ ಮುಂತಾದ ಯೋಜನೆಗಳನ್ನು ಪ್ರಕಟಿಸಿದ್ದಾರೆ.

ಪುನಾರಚಿತ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮ(ಆರ್.ಎ.ಪಿ.ಡಿ.ಆರ್.ಪಿ), 60 ಪಟ್ಟಣಗಳಲ್ಲಿ ಆಧುನಿಕ ನಿರ್ವಹಣೆ ವಿಧಾನಗಳ ಅಳವಡಿಕೆ, 20 ಪಟ್ಟಣಗಳಲ್ಲಿ ವಿದ್ಯುತ್ ಜಾಲ ಉನ್ನತೀಕರಣ, ಬೆಂಗಳೂರು ನಗರದಲ್ಲಿ ಸ್ವಯಂಚಾಲಿತ ವಿತರಣಾ ವ್ಯವಸ್ಥೆ ಆರಂಭಕ್ಕೆ ಚಾಲನೆ ಇತ್ಯಾದಿ ಕಾರ್ಯಕ್ರಮಗಳು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾಗಿರುವುದು ಸುಸ್ಪಷ್ಟ.

ದಿನೇ ದಿನೇ ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲು ಈ ಎಲ್ಲ ಯೋಜನೆಗಳು ಸಹಕಾರಿಯಾಗಲಿವೆ ಎಂಬ ಆಶಯ ನಮ್ಮ ಇಂಧನ ಇಲಾಖೆಯ ಸಚಿವರದ್ದಾಗಿದೆ.

ಇಲಾಖೆಯಲ್ಲಿ ಸುಧಾರಣೆ ತರಲು ಹಾಗೂ ಗ್ರಾಹಕರ ಹಿತ ಕಾಪಾಡಲು ಸರ್ಕಾರ ಹಾಗೂ ಸಚಿವರ ಆಶಯಗಳಿಗೆ ಸ್ಪಂದಿಸುವುದು ನಮ್ಮೆಲ್ಲರ ಕರ್ತವ್ಯ.

ಒಟ್ಟಿನಲ್ಲಿ ಬೆಳಕು ಮತ್ತು ಶಕ್ತಿಯ ಸ್ವಾವಲಂಬನೆಗಾಗಿ ನಾವೆಲ್ಲರೂ ಕಾರ್ಯೋನ್ಮುಖರಾಗುವ ಕಾಲ ಈಗ ಸನ್ನಿಹಿತವಾಗಿದೆ. "ಬೆಸ್ಕಾಂ" ಸಿಬ್ಬಂದಿಗೆ ಎಲ್ಲ ಋತುಗಳೂ ಕಾರ್ಯಯೋಗ್ಯ ಎಂಬುದನ್ನು ಅರಿತು ಮುಂದೆ ಸಾಗೋಣ.

ವಂದನೆಗಳೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ

# ಮಳೆಗಾಲ: ಪರೀಕ್ಷೆಯ ಕಾಲ

ಮೇ ತಿಂಗಳ ಅಂತ್ಯ ಹತ್ತಿರವಾದಂತೆ, ಜನಸಾಮಾನ್ಯರು ಮಳೆ ಬಂದರೆ ಸಾಕಪ್ಪ ಅಂತ ಆಕಾಶದತ್ತ ಕಣ್ಣು ಹರಿಸುತ್ತಾರೆ. ಮಳೆಗಾಲ ಎಂದರೆ ಕೇವಲ ರೈತರಿಗೆ ಮಾತ್ರವಲ್ಲ, ಸಾಮಾನ್ಯವಾಗಿ ಎಲ್ಲರಿಗೂ ಇಷ್ಟವಾಗುವ ಋತು. ಬಿಸಿಲಿಗೆ ಕಾಯ್ದು ಕೆಂಡವಾಗಿದ್ದ ಧರೆ ತಂಪಾಗುತ್ತದೆ. ಎಲೆಗಳುದುರಿ ಬೋಳಾಗಿದ್ದ ಮರಗಳು ಹಚ್ಚಹಸಿರಾಗಿ ಶೃಂಗರಿಸಲ್ಪಡುತ್ತವೆ. ಇನ್ನು, ಅಡುಗೆ ಮನೆಯಲ್ಲಂತೂ ಮಹಿಳೆಯರು ಮಳೆಗಾಲದ ಹೆಸರಿನಲ್ಲಿ ತರಾವರಿ ತಿಂಡಿಗಳನ್ನು ತಯಾರಿಸಿ ಕುಟುಂಬದವರ ಹಸಿವನ್ನು ನೀಗಿಸುತ್ತಾರೆ. ಹೀಗೆ ಮಳೆಗಾಲ ಎಂದರೆ ಎಲ್ಲರಿಗೂ ಇಷ್ಟವಾಗುವ ಕಾಲ.



ಆದರೆ, ಮಳೆಗಾಲವು ಬೆಸ್ಕಾಂ ಉದ್ಯೋಗಿಗಳಿಗೆ ತಾಳ್ಮೆ ಸಹಿತ ಸಾಮರ್ಥ್ಯ ಪರೀಕ್ಷೆಯ ಕಾಲವಾಗಿಬಿಡುತ್ತದೆ. ಚಿಕ್ಕ ಮಳೆಗೂ ನೆಲಕ್ಕುರುಳುವ ಮರಗಳು, ಬೀಸುವ ಗಾಳಿಗೆ ತುಂಡರಿಸಿ ವಿದ್ಯುತ್ ಕಂಬ ಹಾಗೂ ತಂತಿಗಳ ಮೇಲೆ ಮರದ ರೆಂಬೆಗಳು ಬಿದ್ದು ಸೃಷ್ಟಿಸುವ ಅಡಚಣೆ, ತೊಂದರೆ ಅಷ್ಟಿಷ್ಟಲ್ಲ. ಒಂದೆಡೆ ವಿದ್ಯುತ್ ಕಂಬ ಅಥವಾ ತಂತಿಯು ನೆಲಕ್ಕೆ ಬಿದ್ದು ವಿದ್ಯುತ್ ಸಂಪರ್ಕ ತಪ್ಪಿಹೋದರೆ, ಮತ್ತೊಂಡೆಡೆ ತುಂಡರಿಸಿಬಿದ್ದ ತಂತಿಗಳನ್ನು ಸಾರ್ವಜನಿಕರು ತುಳಿದು ಸಂಪರ್ಕಕ್ಕೊಳಗಾಗಿ ವಿದ್ಯುತ್ ಅಪಘಾತ ಉಂಟಾಗುವ ಆತಂಕ. ಇದರ ಜೊತೆಗೆ ಆದಷ್ಟೂ ಬೇಗ ವಿದ್ಯುತ್ ಸಂಪರ್ಕವನ್ನು ಪುನಃ ಸುಸ್ಥಿತಿಗೆ ತರುವ ಒತ್ತಡ. ಹೀಗಾಗಿ ಮಳೆಗಾಲ ಅಂದರೆ, ನಮ್ಮ ಪಾಲಿಗೆ ಸತ್ವಪರೀಕ್ಷೆಯ ಕಾಲ.

ಉದಾಹರಣೆಗೆ: ಮೇ 21ರಂದು ಬೆಂಗಳೂರಿನಲ್ಲಿ ಸುರಿದ ಚಿಕ್ಕ ಮಳೆಯನ್ನೇ ತೆಗೆದುಕೊಳ್ಳಿ. ಅಂದು ಸುರಿದ ಸಾಮಾನ್ಯ ಮಳೆಗೆ ಸುಮಾರು 76 ಮರ/ಮರದ ಕೊಂಬೆಗಳು ನೆಲಕ್ಕುರುಳಿದರೆ, 36 ಕಂಬಗಳು ತುಂಡರಿಸಿ ಬಿದ್ದಿದ್ದವು. ಈ ಅಂಕಿ-ಸಂಖ್ಯೆ ಕೇವಲ ಬೆಂಗಳೂರಿನ ದಕ್ಷಿಣ ಹಾಗೂ ಪಶ್ಚಿಮ ವೃತ್ತಕ್ಕೆ ಸೀಮಿತವಾದದ್ದಾಗಿವೆ. ಅಂದು ಮಳೆಯಿಂದ ಉಂಟಾದ ಅವಾಂತರದಿಂದಾಗಿ ಹಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡು, ನಮ್ಮ ಸಂಸ್ಥೆಯ ಹಿರಿಯ/ಕಿರಿಯ ಅಧಿಕಾರಿಗಳು ಇಡೀ ರಾತ್ರಿಯಲ್ಲಿ ಕರ್ತವ್ಯ ನಿರ್ವಹಿಸಬೇಕಾಯಿತು. ವಿದ್ಯುತ್ ಸರಬರಾಜನ್ನು ಸುಸ್ಥಿತಿಗೆ ತರಲು ಅತೀವ ಶ್ರಮ ಪಡಬೇಕಾಯಿತು. ಹೀಗೆ ಗ್ರಾಹಕರ ನೆಮ್ಮದಿಗಾಗಿ ಹಗಲು ರಾತ್ರಿ ಎನ್ನದೆ ಶ್ರಮಿಸುವ ಬೆಸ್ಕಾಂನ ಎಲ್ಲಾ ಸಿಬ್ಬಂದಿಗೆ ನಮ್ಮ ಗೌರವಪೂರ್ವಕ ಅಭಿನಂದನೆಗಳು.

## ಮಳೆಗಾಲ-ನಮ್ಮ ಕರ್ತವ್ಯ

- ಬೆಸ್ಕಾಂ ಸಹಾಯವಾಣಿ ಸಂಖ್ಯೆ 080-22873333 ಈಗ 1912 ಎಂದು ಬದಲಾಗಿದೆ. ಈ ಹೊಸ ಸಂಖ್ಯೆಯನ್ನು ತಮ್ಮ ವಿಭಾಗದ ಸಮಸ್ತ ಗ್ರಾಹಕರ ಗಮನಕ್ಕೆ ತನ್ನಿ ಹಾಗೂ ಜನಪ್ರಿಯಗೊಳಿಸಿ.
- ಮಳೆಗಾಲದಲ್ಲಿ ಗ್ರಾಹಕರು ತಮ್ಮ ಮನೆಯ ಸುತ್ತಮುತಲಿರುವ ಮರಗಳನ್ನುಬಿ.ಬಿ.ಎಂ.ಪಿ. ಅಥವಾ ಅರಣ್ಯ ಇಲಾಖೆಯ ವತಿಯಿಂದ ಪರೀಕ್ಷಿಸಿಕೊಳ್ಳಲು ಮಾಹಿತಿ ನೀಡಿ ಪ್ರೋತ್ಸಾಹಿಸಿ. ಇದರಿಂದಾಗಿ ಟೊಳ್ಳು ಮರ-ರೆಂಬೆಗಳನ್ನು ಮೊದಲೇ ಪತ್ತೆ ಮಾಡಿ, ಅವಶ್ಯ ಕ್ರಮ ಕೈಗೊಂಡು ಮುಂದಾಗಬಹುದಾದ ಅನಾಹುತಗಳನ್ನು ತಡೆಯಬಹುದು.
- ಮರದ ರೆಂಬೆಗಳು ತುಂಡಾಗಿ ತಂತಿಯ ಮೇಲೆ ಬಿದ್ದರೆ, ಅದನ್ನು ತೆಗೆಯುವ ಪ್ರಯತ್ನ ಮಾಡದಂತೆ ಗ್ರಾಹಕರಿಗೆ ತಿಳಿವಳಿಕೆ ನೀಡಿ. ಇಲ್ಲದಿದ್ದರೆ, ಪ್ರಾಣಾಪಾಯವಾಗಬಹುದು.
- ಮಳೆಯಿಂದಾಗಿ ತಂತಿ/ಕಂಬ ನೆಲಕ್ಕೆ ಬಿದ್ದಿದ್ದರೆ, ಅದರಿಂದ ಸಾಧ್ಯವಾದಷ್ಟೂ ದೂರವಿದ್ದು ತಕ್ಷಣವೇ ಸಹಾಯವಾಣಿಗೆ ಮಾಹಿತಿ ನೀಡಲು ಗ್ರಾಹಕರಿಗೆ ತಿಳಿಸಿ.
- 9243150000 ಸಂಖ್ಯೆಗೆ ಕಿರುಸಂದೇಶ(ಎಸ್.ಎಂ.ಎಸ್) ಮೂಲಕ ದೂರು ನೀಡಲು ಗ್ರಾಹಕರನ್ನು ಪ್ರೋತ್ಸಾಹಿಸಿ. ವಿಶೇಷವಾಗಿ ಮಳೆಗಾಲದಲ್ಲಿ ಒಟ್ಟಿಗೆ ಬರುವ ಸಾವಿರಾರು ಕರೆಗಳಿಂದಾಗಿ ಸಹಾಯವಾಣಿಯ ಮಾರ್ಗಗಳು ಒಂದೇ ಸಮನೆ ಕಾರ್ಯನಿರತವಾಗುವ ಸಾಧ್ಯತೆಗಳಿವೆ. ಅಲ್ಲದೆ ಕಿರುಸಂದೇಶ(ಎಸ್.ಎಂ.ಎಸ್) ಬಳಕೆಯ ಅಭ್ಯಾಸವಿರದ ಹಿರಿಯ ನಾಗರೀಕರಿಗೆ ಈ ಮಾರ್ಗವು ಸಿಗದೆ ಅಡಚಣೆ ಉಂಟಾಗಬಹುದು.
- ವಿದ್ಯುತ್ ಕಂಬ/ಪರಿವರ್ತಕ ಸುತ್ತಲೂ ಮಳೆ ನೀರು ಸಂಗ್ರಹವಾಗುತ್ತಿದ್ದರೆ, ತಕ್ಷಣವೇ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಿ. ಇಲ್ಲದಿದ್ದರೆ, ಪ್ರಾಣಹಾನಿಯಾಗುವ ಸಾಧ್ಯತೆ ಹೆಚ್ಚು.
- ಮಳೆಗಾಲದಲ್ಲಿ ತೇವಾಂಶ ಹೆಚ್ಚಾಗಿ ಪರಿವರ್ತಕದ ಬಾಕ್ಸ್‌ಗಳಿಂದ ವಿದ್ಯುತ್ ಅಘಾತ ಉಂಟಾಗುವ ಸಾಧ್ಯತೆ ಹೆಚ್ಚು. ಈ ಬಗ್ಗೆ ಗ್ರಾಹಕರಿಗೆ ತಿಳಿವಳಿಕೆ ನೀಡಿ. ಪರಿವರ್ತಕಗಳನ್ನು ಮುಟ್ಟುವುದು, ಅದರ ಸಮೀಪ ಕಸ ಹಾಕುವುದು, ಮೂತ್ರ ವಿಸರ್ಜನೆ ಮಾಡುವುದು ಪ್ರಾಣಹಾನಿಗೆ ದಾರಿ ಎಂದು ಮನವರಿಕೆ ಮಾಡಿ.



# ಕಾರ್ಪೋರೇಟ್ ಕಚೇರಿಯಿಂದ ಶಾಖಾ ಕಚೇರಿಗಳವರೆಗಿನ ಹಂತಗಳಲ್ಲಿನ ಸಂಬಂಧಗಳು

ಬೆ.ವಿ.ಕಂ. ಒಂದು ವಿಶಾಲವಾದ ಸಾರ್ವಜನಿಕ ಸೇವೆ ಉದ್ದೇಶವುಳ್ಳ ವ್ಯವಹಾರಿಕ ಸಂಸ್ಥೆಯಾಗಿದ್ದು, ವಿವಿಧ ಆಯಾಮಗಳಲ್ಲಿ ವಿವಿಧ ರೀತಿಯ ಸಂಬಂಧಗಳನ್ನೊಳಗೊಂಡ ವಿಶಿಷ್ಟ ಸಂಸ್ಥೆಯಾಗಿದೆ. ಈ ಸಂಬಂಧಗಳು ಆಡಳಿತ–ಅಧಿಕಾರಿ/ನೌಕರರು, ಆಡಳಿತ–ಸಾರ್ವಜನಿಕರು, ಸರ್ಕಾರ–ಆಡಳಿತ, ನೌಕರರು–ಸಾರ್ವಜನಿಕರು, ಮುಂತಾದ ವಿವಿಧ ಆಯಾಮಗಳಲ್ಲಿರಬಹುದಾಗಿದೆ.

■ಸಂಸ್ಥೆಯ ಅತ್ಯಂತ ತಳಮಟ್ಟದಲ್ಲಿ ಶಾಖಾ ಕಚೇರಿಯಿದ್ದು, ಅದು ಸಾರ್ವಜನಿಕರ ಮತ್ತು ಸಂಸ್ಥೆಯ ಅತ್ಯಂತ ಪ್ರಮುಖ ಕೊಂಡಿಯೂ ಹೌದು. ಸಾರ್ವಜನಿಕರು ಸಂಸ್ಥೆಯೊಂದಿಗಿನ ಬಹುತೇಕ ಅಗತ್ಯಗಳ ಪೂರೈಕೆಯನ್ನು ಈ ಮಟ್ಟದಲ್ಲಿ ಪೂರೈಸಿಕೊಳ್ಳುವುದು ಇಲ್ಲಿ ಸಾಧ್ಯ. ಸಂಪರ್ಕಕ್ಕೆ ಸಂಬಂಧಿಸಿದ ದೂರುಗಳು, ಬಿಲ್ಲಿಂಗ್ ದೂರು, ಸುರಕ್ಷತೆಗೆ ಸಂಬಂಧಿಸಿದ ದೂರುಗಳು, ಇತ್ಯಾದಿಗಳು ಇಲ್ಲಿ ವಿಲೇವಾರಿಯಾಗುತ್ತವೆ. ಸಾರ್ವಜನಿಕರಲ್ಲಿ ಸಂಸ್ಥೆಯ ಬಗ್ಗೆ ಒಳ್ಳೆಯ ಭಾವನೆ ಉಂಟಾಗಬೇಕಾದರೆ ಶಾಖೆಯ ಕರ್ತವ್ಯ ನಿರ್ವಹಣೆ, ಸಿಬ್ಬಂದಿಯ ಸೌಜನ್ಯಯುತ ವರ್ತನೆ, ದೂರುಗಳ ಶೀಘ್ರ ವಿಲೇವಾರಿ ಮುಂತಾದ ಅಂಶಗಳಲ್ಲಿ ಸಿಬ್ಬಂದಿಯು ತೊಡಗಿಕೊಳ್ಳುವಿಕೆ ಪ್ರಮುಖ ಪಾತ್ರ ವಹಿಸುತ್ತದೆ. .

■ಶಾಖಾ ಕಚೇರಿಯ ನಂತರದ ಹಂತ ಉಪವಿಭಾಗ ಕಚೇರಿ. ಇಲ್ಲಿ ಸಾರ್ವಜನಿಕರೊಡನೆ ಸಂಪರ್ಕ ಶಾಖಾ ಕಚೇರಿಗಿಂತ ಅಧಿಕವಿರುತ್ತದೆ. ಏಕೆಂದರೆ ಒಂದಕ್ಕಿಂತ ಅಧಿಕ ಶಾಖಾ ಕಚೇರಿಗಳನ್ನು ಉಪವಿಭಾಗ ಹೊಂದಿರುತ್ತದೆ. ಸಂಸ್ಥೆಯ ಬಹುಭಾಗದ ಕರ್ತವ್ಯಗಳು ಈ ಹಂತದಲ್ಲಿ ನಿರ್ವಹಣೆಯಾಗುತ್ತವೆ. ಆದುದರಿಂದ ಉಪವಿಭಾಗದ ಅಧಿಕಾರಿ–ಸಿಬ್ಬಂದಿ ವರ್ಗ ಹೆಚ್ಚಿನ ದಕ್ಷತೆ ಮತ್ತು ಬದ್ಧತೆ ಹೊಂದಿದ್ದರೆ ಸಂಸ್ಥೆಯ ಖ್ಯಾತಿ ಹೆಚ್ಚುತ್ತದೆ. ಉಪವಿಭಾಗಾಧಿಕಾರಿಯೂ ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ವಿಶ್ವಾಸಕ್ಕೆ ತೆಗೆದು–ಕೊಂಡು ಕರ್ತವ್ಯ ನಿರ್ವಹಿಸಬೇಕಾಗುತ್ತದೆ.

■ಉಪವಿಭಾಗದ ನಂತರದ ಹಂತವೇ ವಿಭಾಗ ಕಚೇರಿ: ವಿಭಾಗ ಮಟ್ಟದಲ್ಲಿ ಸಂಸ್ಥೆಯೊಡನೆ ಸಾರ್ವಜನಿಕರ ಸಂಪರ್ಕ ಉಪವಿಭಾಗದಷ್ಟು ಅಧಿಕವಾಗಿರುವುದಿಲ್ಲ. ಆದರೆ ಉಪವಿಭಾಗದಲ್ಲಿ ಬಗೆಹರಿಸಲಾಗದ ತಾಂತ್ರಿಕ ಸಂಬಂಧಿತ ಸಮಸ್ಯೆಗಳು ಮತ್ತು ಆಡಳಿತಾತ್ಮಕ ಸಮಸ್ಯೆಗಳಿಗೆ ವಿಭಾಗ ಮಟ್ಟದಲ್ಲಿ ಪರಿಹಾರ ದೊರಕಿಸಬೇಕಾಗುತ್ತದೆ. ವಿಭಾಗ ಕಚೇರಿಯು ಉಪವಿಭಾಗ ಮತ್ತು ಉನ್ನತ ಕಚೇರಿಗಳ ನಡುವಿನ ಸಂಪರ್ಕ ಕೊಂಡಿಯಾಗಿರುವುದಲ್ಲದೆ ನೌಕರರ ಸಂಘ, ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಸಂಸ್ಥೆ, ಮಹಿಳಾ ಕುಂದುಕೊರತೆ ನಿವಾರಣಾ ಸಮಿತಿ, ಮುಂತಾದ ಸಂಘ–ಸಂಸ್ಥೆಗಳು ಪ್ರಸ್ತಾಪಿಸುವ ನೌಕರಸಂಬಂಧಿತ ಸಮಸ್ಯೆಗಳ ನಿವಾರಣೆ ಮತ್ತು ಕೆಳಮಟ್ಟದ ಸಿಬ್ಬಂದಿಯ ಬಡ್ತಿ, ವರ್ಗಾವಣೆ, ಮುಂತಾದ ವಿಷಯಗಳನ್ನು ನಿರ್ವಹಿಸುವುದರ ಮೂಲಕ ಸಾರ್ವಜನಿಕ ಸಂಪರ್ಕಕ್ಕಿಂತ ಅಧಿಕವಾಗಿ ಅಧಿಕಾರಿ/ಸಿಬ್ಬಂದಿ ಸಂಪರ್ಕ ಹೊಂದಬೇಕಾದ ಅನಿವಾರ್ಯತೆ ಇರುತ್ತದೆ.

■ವಿಭಾಗದ ಮೇಲಿನ ಹಂತವೆಂದರೆ ವೃತ್ತ ಕಚೇರಿ: ವೃತ್ತ ಮಟ್ಟದಲ್ಲಿ ಅಧೀಕ್ಷಕ ಇಂಜಿನಿಯರ್(ವಿ)ರವರು ಮುಖ್ಯಸ್ಥರಾಗಿರುತ್ತಾರೆ. ಇಲ್ಲಿಯೂ ಸಹಾ ಸಾರ್ವಜನಿಕ ಸಂಪರ್ಕಕ್ಕಿಂತ ಅಧಿಕವಾಗಿ ಸಿಬ್ಬಂದಿ ಸಂಪರ್ಕ ಅಧಿಕವಿರುವ ಹಂತದ ಕಚೇರಿಯಾಗಿದೆ. ವಿಭಾಗ ಮಟ್ಟದಲ್ಲಿ ನಿವಾರಣೆಯಾಗದ ಸಾರ್ವಜನಿಕ ಸಮಸ್ಯೆಗಳನ್ನು ವೃತ್ತ ಕಚೇರಿಯಲ್ಲಿ ನಿರ್ವಹಿಸಬೇಕಾಗುತ್ತದೆ, ಮತ್ತು ಎಲ್ಲ ಕೆಳಗಿನ ಹಂತದ ಕಚೇರಿಗಳ ಮೇಲ್ವಿಚಾರಣೆಯು ವೃತ್ತ ಕಚೇರಿಯ ಜವಾಬ್ದಾರಿಯಾಗಿರುತ್ತದೆ

■ವಲಯ ಕಚೇರಿಯು ವೃತ್ತ ಕಚೇರಿಗಿಂತ ನಂತರದ ಹಂತದ ಕಚೇರಿಯಾಗಿದ್ದು, ಕಾರ್ಪೋರೇಟ್ ಕಚೇರಿಯ ಬಹುತೇಕ ಸೂಚನೆಗಳು ವಲಯ ಕಚೇರಿಯ ಮೂಲಕ ಜಾರಿಯಾಗುತ್ತವೆ. ಮುಖ್ಯಇಂಜಿನಿಯರ್ (ವಿ)ರವರು ವಲಯ ಕಚೇರಿಯ ಮುಖ್ಯಸ್ಥರು. ವಲಯ ಕಚೇರಿಯ ವ್ಯಾಪ್ತಿಯಲ್ಲಿ 2–3 ವೃತ್ತ ಕಚೇರಿಗಳು ಕಾರ್ಯನಿರತವಾಗಿರುತ್ತವೆ. ವೃತ್ತ ಕಚೇರಿಯ ಅಧಿಕಾರ ವ್ಯಾಪ್ತಿ ಮೀರಿದ ಸಿಬ್ಬಂದಿ ವಿಷಯಗಳನ್ನು ಇಲ್ಲಿ ನಿರ್ವಹಿಸಬೇಕಾಗುತ್ತದೆ.

■ಕಂಪನಿಯ ಆಡಳಿತದ ಅತ್ಯುನ್ನತ ಮಟ್ಟವಾದ 'ಕಾರ್ಪೋರೇಟ್ ಕಚೇರಿಯಲ್ಲಿ ರಾಜ್ಯ ಮಟ್ಟದ ನೌಕರರ/ಅಧಿಕಾರಿಗಳ ಸಂಘಟನೆಗಳ ಸಂಪರ್ಕ ಮತ್ತು ಆಡಳಿತದಲ್ಲಿ ನೀತಿ–ನಿರೂಪಣೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರಿ ಇಲಾಖೆಗಳ ಸಂಪರ್ಕ ಅತ್ಯಧಿಕವಾಗಿರುತ್ತದೆ.

ಈ ರೀತಿ ಶಾಖಾ ಕಚೇರಿಯಿಂದ ಕಾರ್ಪೋರೇಟ್ ಕಚೇರಿಯವರೆಗೆ ವಿವಿಧ ಹಂತಗಳಲ್ಲಿ ಸಾರ್ವಜನಿಕರ ಸಂಪರ್ಕ, ಸಿಬ್ಬಂದಿ ಸಂಪರ್ಕ, ಇತ್ಯಾದಿಗಳು ವ್ಯತ್ಯಯವಾಗುತ್ತಾ ಹೋಗುತ್ತದೆ. ಆದರೂ ಉತ್ತಮ ಆಡಳಿತದ ದೃಷ್ಟಿಯಿಂದ ಎಲ್ಲಾ ಹಂತದ ಸಂಪರ್ಕಗಳಲ್ಲಿ ಪರಸ್ಪರ ವಿಶ್ವಾಸ, ಕನಿಷ್ಠ ಸೌಜನ್ಯ, ದಕ್ಷತೆ ಮತ್ತು ಸಾಮಾಜಿಕ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಣೆಗೆ ಆದ್ಯತೆ ನೀಡಬೇಕಾಗಿರುತ್ತದೆ.

**–ಸಿ.ಕೆ. ಚಂದ್ರಶೇಖರ್**

ಉ.ಪ್ರ.ವ್ಯ. ಹಾಗೂ ಕ.ಅ.ಪ್ರಾ., ಬೆವಿಕಂ

## ಬೆಸ್ಕಾಂ ಸಹಾಯವಾಣಿ ಸಂಖ್ಯೆ ಬದಲಾಗಿದೆ




ಬೆಸ್ಕಾಂ ಸಹಾಯವಾಣಿ ಸಂಖ್ಯೆ **080-22873333** ಈಗ **1912** ಎಂದು ಬದಲಾಗಿದೆ. ನಾಲ್ಕು ಅಂಕಿಗಳ ಸಹಾಯವಾಣಿಯ ಸಂಖ್ಯೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸುಲಭ. ಹೀಗಾಗಿ ಗ್ರಾಹಕರ ಹಿತದೃಷ್ಟಿಯಿಂದ ಕಂಪನಿಯು ಈ ಬದಲಾವಣೆಯನ್ನು ತಂದಿದೆ. ತಮ್ಮ ವಿಭಾಗದ ಎಲ್ಲಾ ಗ್ರಾಹಕರಿಗೆ ಬದಲಾದ ಈ ಸಹಾಯವಾಣಿಯ ಹೊಸ ಸಂಖ್ಯೆಯನ್ನು ಪರಿಚಯಿಸಿ ಜನಪ್ರಿಯಗೊಳಿಸಿ. ಸ್ಥಿರ ಹಾಗೂ ಮೊಬೈಲ್ ದೂರವಾಣಿಯಿಂದ ಯಾವುದೇ ಎಸ್.ಟಿ.ಡಿ.ಕೋಡ್ ಇಲ್ಲದೆ **1912**ಕ್ಕೆ ನೇರವಾಗಿ ಕರೆ ಮಾಡಬಹುದು.

# ವಿದ್ಯುತ್ ಹಂಚಿಕೆ ಒಪ್ಪಂದ




ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯದ ನಡುವೆ ವಿದ್ಯುತ್ ಹಂಚಿಕೊಳ್ಳುವ ಮಹತ್ವದ ಪ್ರಿಯದರ್ಶಿನಿ ಜುರಾಲ ಜಲವಿದ್ಯುತ್ ಯೋಜನೆಗೆ ಇತ್ತೀಚೆಗಷ್ಟೇ ಸರ್ಕಾರ ಸಹಿ ಹಾಕಿದೆ. ಸುಮಾರು 720 ಕೋಟಿ ರೂ.ಗಳ ಯೋಜನೆ ಇದಾಗಿದ್ದು, ಈ ಒಪ್ಪಂದದಿಂದ ರಾಜ್ಯಕ್ಕೆ ಸುಮಾರು 117 ಮೆಗಾವಾಟ್ ವಿದ್ಯುತ್ ಲಭ್ಯವಾಗಲಿದೆ. ಆಂಧ್ರಪ್ರದೇಶದ ಮೆಹಬೂಬ್ ನಗರದಲ್ಲಿ ನೀರಾವರಿ ಹಾಗೂ ಜಲವಿದ್ಯುತ್ ಉತ್ಪಾದನೆಗಾಗಿ ಈ ಯೋಜನೆಯನ್ನು ಸ್ಥಾಪಿಸಲಾಗಿದೆ. ರಾಯಚೂರಿನಿಂದ ಜುರಾಲವರೆಗೆ 48 ಕಿ.ಮೀ. ಉದ್ದದ 220ಕೆ.ವಿ. ಸಾಮರ್ಥ್ಯದ ಡಬಲ್ ಸರ್ಕ್ಯೂಟ್ ವಿದ್ಯುತ್ ಮಾರ್ಗ ನಿರ್ಮಿಸಲು ನಿರ್ಧರಿಸಲಾಗಿತ್ತು. ಇದಕ್ಕಾಗಿ ರಾಯಚೂರಿನಲ್ಲಿ 2,466 ಎಕರೆ ಜಾಗವನ್ನು ಮೀಸಲಿಡಲಾಗಿದೆ.

234.6 ಮೆಗಾವಾಟ್ ಸಾಮರ್ಥ್ಯದ ಯೋಜನೆಯಲ್ಲಿ 39.1 ಮೆಗಾವಾಟ್ ಸಾಮರ್ಥ್ಯದ 6 ಘಟಕಗಳು ಬರುತ್ತವೆ. ಇದೊಂದು ನದಿ ಹರಿವು ಯೋಜನೆಯಾಗಿದ್ದು, ಮಳೆಗಾಲದಿಂದಲೇ ವಿದ್ಯುತ್ ಉತ್ಪಾದನೆಯು ಆರಂಭಗೊಳ್ಳಲಿದ್ದು, ಇದರಿಂದಾಗಿ ರಾಜ್ಯದಲ್ಲಿ ವಿದ್ಯುತ್ ಪೂರೈಕೆ ಉತ್ತಮಗೊಳ್ಳಲಿದೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶ ಮತ್ತು ಕರ್ನಾಟಕದ ನಡುವೆ ವಿದ್ಯುತ್ ಹಂಚಿಕೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್, ಶ್ರೀ ಪಿ. ರವಿಕುಮಾರ್, ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, , ಎ.ಪಿ.ಜಿ.ಎನ್.ಸಿ.ಒ. ಕಂಪನಿಯ ಅಧ್ಯಕ್ಷರಾದ ಶ್ರೀ ಸುರೇಶ್ ಚಂದ್, ಬೆಸ್ಕಾಂನ ಶ್ರೀ ಬಿ.ಎಲ್. ಗುರುಪ್ರಸಾದ್, ನಿರ್ದೇಶಕರು(ಹಣಕಾಸು) ಮತ್ತಿತರರು ಉಪಸ್ಥಿತರಿದ್ದರು.

## ಪದದಾಟ

ಪದದಾಟ. ಪದದಾಟ ಎಂದರೆ ತಕ್ಷಣ ನೆನಪಾಗುವುದು ಎಡ ಅಥವಾ ಬಲಕ್ಕೆ , ಮೇಲೆ ಅಥವಾ ಕೆಳಕ್ಕೆ ಪದಜೋಡಣೆ ಆಟ. ಆದರೆ ಇದು ಒಂದು ರೀತಿಯ ಹೊಸ ಆಟ. ನಮ್ಮ ಬುದ್ಧಿ ಸ್ಮರಣ ಶಕ್ತಿಯನ್ನು ಮತ್ತಷ್ಟು ತೀಕ್ಷ್ಣ ಹಾಗೂ ವೇಗವಾಗಿರಿಸಿಕೊಳ್ಳಲು ಇದು ಉಪಯುಕ್ತ. ನಮ್ಮ ದೈನಂದಿಕ ಕೆಲಸಕಾರ್ಯ ನಿರ್ವಹಣೆಯಲ್ಲಿ ಪದ ಬಳಕೆ ಮಾಡುವಾಗ ಸಂದೇಹ ಉಂಟಾಗುವ ಸಾಧ್ಯತೆ ಇರುತ್ತದೆ. ಸಂದರ್ಭಕ್ಕನುಗುಣವಾಗಿ ಪದ ಬಳಕೆ ಮಾಡಬೇಕಾಗುತ್ತದೆ. ಅನೇಕ ಪದಗಳು ವಿವಿಧ ಅರ್ಥಗಳನ್ನು ಹೊಂದಿರುತ್ತವೆ. ಕೆಲವೊಮ್ಮೆ ಸಮೀಪಾರ್ಥವನ್ನು ಸಹ ಹೊಂದಿರುವ ಸಾಧ್ಯತೆ ಇರುತ್ತದೆ, ಪ್ರಾರಂಭಿಕವಾಗಿ ಈ ಪ್ರಯತ್ನ:

**A) Disclose, Announce, Publish**

**B Aggregate, Collect, Receive, Accept**

**C) Appeal, Request,**

**D) Provisional, Temporary**

**E) Accompany, help, Assist**

**F Inspection, Test, Verify, Check**

**G) Regular, Continuous**

ದಯವಿಟ್ಟು ಈ ಪದದಾಟ ಮುಂದುವರೆಯಲು ಕೈ ಜೋಡಿಸಿ. ನಿಮ್ಮ ಪ್ರಯತ್ನ ಪೂರ್ವಕ ಕೊಡುಗೆ ನೀಡಿ. ಮುಂದೊಂದು ದಿನ ಎಲ್ಲಾದರೂ ಈ ಆಟ ಯಶಸ್ವಿಯಾದರೆ, ಈ ಪದದಾಟ ಬೆಸ್ಕಾಂ ಸ್ನೇಹಿ ಗೃಹಪತ್ರಿಕೆಯಿಂದ ಪ್ರಾರಂಭವಾಯಿತು ಎಂಬ ಹೆಗ್ಗಳಿಗೆ ನಮ್ಮೆಲ್ಲರದಾಗಲಿ.

ಹಾ ಈ ಪದದಾಟ ಎಂದರೆ ಕೇವಲ ಸಮೀಪಾರ್ಥವೊಂದೇ ಅಲ್ಲ. ಮುಂದಿನ ಸಂಚಿಕೆಯಲ್ಲಿ ಮತ್ತೊಂದು ರೀತಿಯ ಪದದಾಟವನ್ನು ಯಾರಾದರೂ ಪ್ರಯತ್ನಿಸುವಿರೇ?

## ಗ್ರಾಹಕರ ಮೆಚ್ಚುಗೆಯ ನುಡಿ

ದಿ 05-06-2014

**"ಬೆಸ್ಕಾಂ ವಿದ್ಯುತ್ ಪ್ರಸರಣ" ದೂರು ವಿಭಾಗಕ್ಕೆ ಧನ್ಯವಾದಗಳು**

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಮೂಗನಾಯಕನಕೋಟೆ ಗ್ರಾಮದ ಕೆರೆ ಹಿಂಭಾಗದಲ್ಲಿ ಬೆಸ್ಕಾಂಗೆ ಸೇರಿದ ಸುಮಾರು ಹತ್ತು ವಿದ್ಯುತ್ ಕಂಬಗಳು ಮುರಿದು ಬಿದ್ದು, ಸುಮಾರು 9 ತಿಂಗಳುಗಳಾಗುತ್ತಾ ಬಂದರೂ ದುರಸ್ತಿ ಕಾಣದೆ, ನೂರಾರು ರೈತರ ತೆಂಗು, ಅಡಿಕೆ ತೋಟಗಳು ಒಣಗುತ್ತಿದ್ದವು.

ಈ ಬಗ್ಗೆ ಎಲ್ಲಾ ಪ್ರಯತ್ನಗಳು ಮುಗಿದ ಮೇಲೆ ಬೆಂಗಳೂರಿನಲ್ಲಿರುವ ವಿದ್ಯುತ್ ಪ್ರಸರಣದ ದೂರು ವಿಭಾಗಕ್ಕೆ ತಾ: 24-5-2014ರಂದು ದೂರು ಕೊಟ್ಟ ಮೇರೆಗೆ ತಾ:24/25-05-2014ರಂದೇ ವಿದ್ಯುತ್ ಕಂಬಗಳನ್ನು ನೆಟ್ಟು ದುರಸ್ತಿಗೊಳಿಸಲಾಯಿತು. ಇದು ಅತ್ಯಂತ ದಕ್ಷತೆಯ ಪ್ರತೀಕವೆಂದು ಭಾವಿಸಿ ನಮನಗಳನ್ನು ಸಲ್ಲಿಸಲಾಗುತ್ತಿದೆ.

**ಇಲಾಖೆಯ ದೂರು ವಿಭಾಗದ ಈ ಮೆಚ್ಚುಗೆಯ ಕಾರ್ಯಕ್ಕಾಗಿ "ಬೆಸ್ಕಾಂ" ಬಳಗಕ್ಕೆ ವಿಶೇಷವಾಗಿ ಕೇಂದ್ರ ದೂರು ವಿಭಾಗದ ಅಧಿಕಾರ ವರ್ಗಕ್ಕೆ ನೂರಾರು ರೈತರ ತುಂಬು ಹೃದಯದ ಧನ್ಯವಾದಗಳು.**

ಹೆಚ್.ಬಿ.ಶಿವಣ್ಣ
ಹಲಸಿನ ನಾಗೇನಹಳ್ಳಿ
ಗುಬ್ಬಿ ತಾಲ್ಲೂಕು.
ಮೊಬೈಲ್ ನಂ.9844212438

# ಆಹ್ಲಾದ–ಆನಂದ



ಆಹ್ಲಾದ ಹಾಗೂ ಆರೋಗ್ಯ ಇವೆರಡೂ ಮಾನವ ಜೀವಿಗೆ ಅತಿ ಮುಖ್ಯ. ನಮ್ಮ ಅಖಂಡ ಭಾರತ ದೇಶದಲ್ಲಿ ಮನಸ್ಸಿಗೆ ಆಹ್ಲಾದ ನೀಡುವ ಆರೋಗ್ಯಕರ ವಾತಾವರಣವಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಅಂತಹ ಸ್ಥಳಗಳಲ್ಲಿ ಹಿಮಾಚಲ ಪ್ರದೇಶದ ಕಂಗ್ರಾ ಜಿಲ್ಲೆಯ ಧರ್ಮ್‌ಶಾಲಾ ಪಟ್ಟಣದ ಸಮೀಪದಲ್ಲಿರುವ ಮೆಕ್ಲೋಡ್‌ಗಂಜ್ (Mcleod ganj) ಒಂದು. ಹಿಮಾಲಯ ಪರ್ವತದ ತಪ್ಪಲಿನಲ್ಲಿದೆ ಈ ಸುಂದರ ಸ್ಥಳ.

ಮೆಕ್ಲೋಡ್‌ಗಂಜ್ (Mcleod ganj) ಇದು ಸಣ್ಣ ಹಳ್ಳಿ ಅಥವಾ ದೊಡ್ಡ ನಗರವಲ್ಲ, ಪುಟ್ಟ ಪಟ್ಟಣ. ದೆಹಲಿಯಿಂದ ಸುಮಾರು 500 ಕಿಲೋ ಮೀಟರ್ ದೂರದಲ್ಲಿದೆ ಈ ಸುಂದರ ಪ್ರೇಕ್ಷಣೀಯ ಪಟ್ಟಣ. ಗೂಗಲ್ ಸರ್ಚ್ ಕೊಟ್ಟರೆ ಈ ಪಟ್ಟಣದ ಬಗ್ಗೆ ಅವಶ್ಯ ಮಾಹಿತಿ ಲಭ್ಯವಾಗುತ್ತದೆ.

ಈ ಪಟ್ಟಣಕ್ಕೆ ದೆಹಲಿಯಿಂದ ಅಥವಾ ಪಂಜಾಬ್ ರಾಜ್ಯದ ಚಂಡೀಗಡದಿಂದಲೂ ತಲುಪಬಹುದು. ದೆಹಲಿಯಿಂದ ವಿಮಾನ ಮಾರ್ಗ ಅಥವಾ ರಸ್ತೆ ಮಾರ್ಗದ ಮೂಲಕ ತಲುಪಬಹುದು. ಚಂಡೀಗಡದಿಂಡ ರಸ್ತೆ ಮೂಲಕ ಮಾತ್ರ ತಲುಪಬಹುದಾಗಿದೆ. ದೆಹಲಿಯಿಂದ ವಿಮಾನ ಮಾರ್ಗದ ಮೂಲಕ ಸುಮಾರು 90 ನಿಮಿಷಗಳ ಪ್ರಯಾಣ. ಕಂಗ್ರಾ ವಿಮಾನ ನಿಲ್ದಾಣ. ಈ ವಿಮಾನ ನಿಲ್ದಾಣದಿಂದ ಧರ್ಮ್‌ಶಾಲ ಸುಮಾರು 14 ಕಿ.ಮೀ. ಹಾಗೂ ಧರ್ಮ್‌ಶಾಲಾದಿಂದ ಮೆಕ್ಲೋಡ್‌ಗಂಜ್ (Mcleod ganj) ಸುಮಾರು 10 ಕಿ.ಮೀ. ದೂರದಲ್ಲಿದೆ. ಕಂಗ್ರಾ ವಿಮಾನ ನಿಲ್ದಾಣದಿಂದ ಟ್ಯಾಕ್ಸಿ ಸೌಲಭ್ಯವಿದೆ. ಬಸ್ ಮೂಲಕವೂ ತಲುಪಬಹುದು.



ಈ ಪಟ್ಟಣದಲ್ಲಿ ಮ್ಯೂಸಿಯಂ, ಪ್ರಾಚೀನ ಚರ್ಚ್, ದಲೈಲಾಮಾ ಆಶ್ರಮ, ದಲ್ ಲೇಕ್, ಭಾಗ್‌ಸುನಾಗ್ ಫಾಲ್ಸ್, ಕಂಗ್ರಾ ಕಣಿವೆ, ನಡ್ಡಿ ಪಾಯಿಂಟ್(ಸೂರ್ಯಾಸ್ತಮ ವೀಕ್ಷಣೆಯ ಸ್ಥಳ), ಹಿಮಾಲಯ ಪರ್ವತ ವೀಕ್ಷಣೆಯ ಸ್ಥಳ, ಕುನಾಲ್ ಪತ್ರಿ(ರಾಕ್ ಟೆಂಪಲ್ಸ್), ವಾರ್ ಮೆಮೋರಿಯಲ್, ಇನ್ನೂ ಹಲವಾರು ಕಣಿವೆ ಪ್ರದೇಶಗಳ ವೀಕ್ಷಣೀಯ ಸ್ಥಳಗಳಿವೆ.

ಈ ಪಟ್ಟಣಕ್ಕೆ ದೇಶ–ವಿದೇಶಗಳಿಂದ ಆರೋಗ್ಯ ನಿಮಿತ್ತ ಬರುತ್ತಾರೆಂದರೆ ಬಹುಶಃ ಆಶ್ಚರ್ಯವಾಗಬಹುದು. ಈ ಪಟ್ಟಣದಲ್ಲಿ ಒಬ್ಬ ವಿಶೇಷ ವೈದ್ಯರಿದ್ದಾರೆ. ಅವರೇ ಡಾ॥ ಯೆಶೀ ದೋಂಡೇನ್ (Dr. Yeshi Dhonden). ಸುಮಾರು 98 ವಯಸ್ಸಿನ ಇವರು ವಿಶ್ವ ಪ್ರಸಿದ್ಧರು. ಕ್ಯಾನ್ಸರ್, ಬ್ರೈನ್ ಟ್ಯೂಮರ್ ಇಂತಹ ಘೋರ ಕಾಯಿಲೆಗಳಲ್ಲದೆ ಇತರ ಕಾಯಿಲೆಗಳಿಗೂ ಗಿಡಮೂಲಿಕೆಗಳ (ಹರ್ಬಲ್) ಮಾತ್ರೆ ಹಾಗೂ ಪುಡಿಯ ರೂಪದ ಔಷಧ ನೀಡುತ್ತಾರೆ.



ದಿನವೊಂದಕ್ಕೆ ಕೇವಲ 50 ರೋಗಿಗಳ ವೈದ್ಯಕೀಯ ತಪಾಸಣೆ ಮಾಡುತ್ತಾರೆ. ಮೂತ್ರ ಹಾಗೂ ದೇಹದ ವಿವಿಧ ಭಾಗಗಳಲ್ಲಿ ನಾಡಿ ಪರೀಕ್ಷೆ ಮಾಡಿ ಔಷಧ ನೀಡುತ್ತಾರೆ. ಈ ವೈದ್ಯರ ಬಳಿ ವೈದ್ಯಕೀಯ ತಪಾಸಣೆ ಸಂದರ್ಶನ ಪಡೆಯುವುದು ಒಂದು ಸಾಹಸವೇ ಸರಿ. ನಾಳೆಯ ದಿನ ಸಂದರ್ಶನ ಪಡೆಯಲು ಇಂದು ಬೆಳಗಿನ ಜಾವ 5 ಗಂಟೆಯಿಂದಲೇ ರೋಗಿ ಅಥವಾ ರೋಗಿಯ ಕಡೆಯವರು ಸಾಲಿನಲ್ಲಿ ನಿಲ್ಲಬೇಕು. ಮಧ್ಯಾಹ್ನ 2 ಗಂಟೆಗೆ 50 ಜನರಿಗೆ ಟೋಕನ್ ನೀಡಲಾಗುತ್ತದೆ. ಮಾರನೆಯ ದಿನ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1:30ರವರೆಗೆ ತಪಾಸಣೆ ನಡೆಸುತ್ತಾರೆ.

ಮೊದಲ ಸಲ ರೋಗಿಯು ತಪಾಸಣೆಗೆ ಹೋದರಾಯಿತು. ನಂತರ ಔಷಧವನ್ನು ಅಂಚೆ ಮೂಲಕ ಪಡೆಯುವ ಸೌಲಭ್ಯವಿದೆ. ಆರೋಗ್ಯಕ್ಕಲ್ಲವಾದರೂ, ಆಹ್ಲಾದಕ್ಕಾದರೂ ಒಮ್ಮೆ ಭೇಟಿ ನೀಡಬಹುದಾದ ಸ್ಥಳ ಮೆಕ್ಲೋಡ್‌ಗಂಜ್ (Mcleod ganj).

**-ಎಸ್.ಕೆ. ನಾಗರಾಜ್,**
ನಿ.ವ್ಯ. (ಹಿರಿಯ ಸಹಾಯಕ), ಬೆವಿಕಂ

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸುದಾರರ ಷರತ್ತುಗಳು

## ಗ್ರಾಹಕರ ಮರುವರ್ಗೀಕರಣ

ಒಂದು ವೇಳೆ ಯಾವುದೇ ಗ್ರಾಹಕನೊಬ್ಬನನ್ನು ತಪ್ಪಾಗಿ ವರ್ಗೀಕರಿಸಲಾಗಿದೆ ಎಂದು ಕಂಡುಬಂದರೆ, ಗ್ರಾಹಕನನ್ನು ಸೂಕ್ತ ಪ್ರವರ್ಗದ ಅಡಿಯಲ್ಲಿ ಪುನರ್‌ವರ್ಗೀಕರಿಸುವ ಸಲುವಾಗಿ, ಅವಶ್ಯವೆಂದು ಕಂಡುಬಂದರೆ ಇತರ ಷರತ್ತುಗಳನ್ನು ಪಾಲಿಸಿ, ಹೊಸ ಒಪ್ಪಂದವನ್ನು ಸಲ್ಲಿಸುವಂತೆ ಲೈಸೆನ್ಸುದಾರರ ಇಂಜಿನಿಯರ್‌ರವರು ಆ ಗ್ರಾಹಕನಿಗೆ 15 ಸ್ಪಷ್ಟ ದಿನಗಳೊಳಗೆ ಅವಶ್ಯ ನೋಟೀಸನ್ನು ನೀಡಿ ಆನಂತರ ಆ ಗ್ರಾಹಕನನ್ನು ಮಾರ್ಪಡಿಸಿದ ಪ್ರವರ್ಗಕ್ಕೆ ಪುನರ್‌ವರ್ಗೀಕರಿಸಬಹುದು.

ನಿಗದಿತ ಅವಧಿಯೊಳಗೆ ಆ ಗ್ರಾಹಕನು ನೋಟೀಸಿಗೆ ಸ್ಪಂದಿಸದೆ ಹಾಗೂ ಹೊಸ ಒಪ್ಪಂದವನ್ನು ಸಲ್ಲಿಸದಿದ್ದರೆ, ಇಂಜಿನಿಯರ್‌ರವರು ಹದಿನೈದು ಸ್ಪಷ್ಟ ದಿನಗಳ ನೋಟೀಸನ್ನು ಜಾರಿ ಮಾಡಿ, ಅವನಿಂದ ಯಾವುದೇ ವಿವರಣೆಗಳಿದ್ದರೆ ಅವನ್ನು ಪರಿಗಣಿಸಿ ಸ್ಥಾಪನದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸತಕ್ಕದ್ದು. ವಿದ್ಯುತ್ ಸರಬರಾಜು ಕಡಿತಗೊಳಿಸಿದ ಪ್ರಕರಣದಲ್ಲಿ, ಹೊಸ ಒಪ್ಪಂದವನ್ನು ನೀಡಿದ ಕೂಡಲೇ ವಿದ್ಯುತ್ ಪುನರ್ ಸಂಪರ್ಕ ಒದಗಿಸುವುದು.

### ವಿಶೇಷ ಒಪ್ಪಂದದ ಅಡಿಯಲ್ಲಿನ ಗ್ರಾಹಕರು

ಯಾವುದೇ ಗ್ರಾಹಕನು ಈ ಷರತ್ತುಗಳಲ್ಲಿ ಸೂಚಿಸಿರುವ ಯಾವುದೇ ಪ್ರವರ್ಗಕ್ಕೆ ಒಳಪಡದಿದ್ದರೆ, ಸರಬರಾಜಿನ ಉದ್ದೇಶ ಹಾಗೂ ಸ್ವರೂಪವನ್ನು ಪರಿಗಣಿಸಿ ಲೈಸೆನ್ಸುದಾರರು ವಿಶೇಷ ವಿದ್ಯುತ್ ದರ ಹಾಗೂ ಸರಬರಾಜು ಷರತ್ತುಗಳನ್ನು ನಿಗದಿಪಡಿಸಬಹುದು. ಇಂತಹ ಉದ್ದೇಶಗಳಿಗೆ, ಲೈಸೆನ್ಸುದಾರರು, ಆಯೋಗದ ಅನುಮೋದನೆಯೊಂದಿಗೆ ನಿಗದಿತ ಒಪ್ಪಂದದ ಪತ್ರದ ನಮೂನೆಯಲ್ಲಿ ಸೂಕ್ತ ಮಾರ್ಪಾಡನ್ನು ಮಾಡಿಕೊಳ್ಳುವ ಮೂಲಕ ವಿಶೇಷ ಒಪ್ಪಂದ ಮಾಡಿಕೊಳ್ಳಬಹುದಾಗಿದೆ. ಇಂತಹ ಪ್ರಕರಣಗಳಲ್ಲಿ ಆಯೋಗವು ಪ್ರತ್ಯೇಕ ವಿದ್ಯುತ್ ದರ ಅನುಮೋದನೆಯನ್ನು ನೀಡುತ್ತದೆ.

### ಅಧ್ಯಾಯ–IV

**4.00 ವಿದ್ಯುತ್ ಸರಬರಾಜು ಏರ್ಪಾಡಿಗಾಗಿ ಸಾಮಾನ್ಯ ನಿಯಮಗಳು**

**4.01 ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಲೈಸೆನ್ಸುದಾರರ ಕರ್ತವ್ಯಗಳು:**

ಪ್ರತಿ ವಿತರಣ ಲೈಸೆನ್ಸುದಾರರು, ಯಾವುದೇ ಆವರಣದ ಮಾಲೀಕರಾಗಲೀ ಅಥವಾ ಅನುಭೋಗದಾರರಾಗಲೀ, ವಿದ್ಯುತ್ ಸರಬರಾಜಿಗಾಗಿ ಅರ್ಜಿಯನ್ನು ನೀಡಿದ ನಂತರ ಕವಿನಿ ಆಯೋಗದ(ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಲೈಸೆನ್ಸುದಾರರ ಕರ್ತವ್ಯಗಳು) ನಿಬಂಧನೆಗಳು, 2004(ಅನುಬಂಧ–1)ರಲ್ಲಿ ನಿರ್ದಿಷ್ಟಪಡಿಸಿರುವಂತೆ ವಿದ್ಯುತ್ ಸರಬರಾಜನ್ನು ನೀಡತಕ್ಕದ್ದು.

**4.02 ವಿದ್ಯುತ್ ಸರಬರಾಜಿಗಾಗಿ/ಹೆಚ್ಚುವರಿ ವಿದ್ಯುತ್ ಸರಬರಾಜಿಗಾಗಿ ಅರ್ಜಿ:**

1 ವಿದ್ಯುತ್ ಸರಬರಾಜನ್ನು ಬಯಸುವ ಯಾವುದೇ ವ್ಯಕ್ತಿಯಾಗಲೀ, ಈ ಷರತ್ತುಗಳಲ್ಲಿ ಸೂಚಿಸಿರುವ ಇತರ ನಿರ್ದಿಷ್ಟ ಅಗತ್ಯತೆಗಳೊಡನೆ ಕೆಳಗೆ ಸೂಚಿಸಿರುವ ಅಗತ್ಯತೆಗಳನ್ನು ಪೂರೈಸಬೇಕಾಗುತ್ತದೆ.

1) ವಿದ್ಯುತ್ ಸರಬರಾಜು ಅವಶ್ಯವಿರುವ ಆವರಣದ ಮಾಲೀಕರಾಗಲಿ ಅಥವಾ ಅದರ ಅನುಭೋಗದಾರರಾಗಲಿ, ವಿತರಣ ಲೈಸೆನ್ಸುದಾರರಿಗೆ ವಿದ್ಯುತ್ ಸರಬರಾಜು ಕೋರಿಕೆಯ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಅರ್ಜಿಯನ್ನು ದ್ವಿಪ್ರತಿಯಲ್ಲಿ ಮತ್ತು ಕಲಮು 30.01ರ ಪ್ರಕಾರ ನಿಗದಿತ ಶುಲ್ಕ ಹಾಗೂ ವೆಚ್ಚಗಳೊಡನೆ ಸಲ್ಲಿಸಬೇಕು. ಲೈಸೆನ್ಸುದಾರರು, ಅರ್ಜಿಯ ತಲುಪೂಪ್ತಿಗೆಯ ಮೊಹರು ಹಾಗೂ ಸಹಿ ಇರುವ ದ್ವಿಪ್ರತಿಯನ್ನು ಅರ್ಜಿದಾರರಿಗೆ ಹಿಂತಿರುಗಿಸತಕ್ಕದ್ದು ಹಾಗೂ ಅರ್ಜಿದಾರರಿಗೆ ಕ.ವಿ.ನಿ ಆಯೋಗದ ನಿಬಂಧನೆಗಳು 2004ರ (ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಲೈಸೆನ್ಸುದಾರರ ಕರ್ತವ್ಯಗಳು) (ಅನುಬಂಧ–1)ರ ನಿಯಮಗಳನ್ನು ತಿಳಿಯಪಡಿಸತಕ್ಕದ್ದು. ಈ ನಿಯಮಗಳು ಹೆಚ್ಚುವರಿ ವಿದ್ಯುತ್ ಕೋರಿಕೆ ಹಾಗೂ ವೋಲ್ಟೇಜು ಮಟ್ಟದ ಬದಲಾವಣೆ ಕೋರಿಕೆಗೂ ಅನ್ವಯಿಸುತ್ತದೆ.

2) ಭರ್ತಿ ಮಾಡಿದ ಅರ್ಜಿಯನ್ನು ಲೈಸೆನ್ಸುದಾರರ ಸ್ಥಳೀಯ ಕಚೇರಿಯಲ್ಲಿ ನೋಂದಾಯಿಸತಕ್ಕದ್ದು. ಅರ್ಜಿಯ ಜೊತೆಗೆ ಕೆಳಗೆ ಸೂಚಿಸಿರುವ ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿ ಅಥವಾ ಬೆಳಕಚ್ಚು ಪ್ರತಿಯನ್ನು ಲಗತ್ತಿಸುವುದು.

(ಎ) ಮಾಲಿಕತ್ವದ ಅಥವಾ ಅನುಭೋಗದಾರಿಕೆಯ ಪುರಾವೆ.

(ಬಿ) ಪರವಾನಗಿಯನ್ನು ಪಡೆದಿದ್ದರೆ, ಸ್ಥಳೀಯ ಪ್ರಾಧಿಕಾರದಿಂದ ಪಡೆದಿರುವ ಅಂತಹ ಸಾಮಾನ್ಯ ಪರವಾನಗಿ.

(ಸಿ) ಪಾಲುದಾರಿಕೆ ಸಂಸ್ಥೆಯಾಗಿದ್ದರೆ, ಪಾಲುದಾರಿಕೆಯ ಹಕ್ಕುಪತ್ರ.

(ಡಿ) ನಿಯಮಿತ ಕಂಪನಿಯಾಗಿದ್ದರೆ, ಒಪ್ಪಂದದ ದಸ್ತಾವೇಜು, ಕಾನೂನುಬದ್ಧವಾಗಿ ಪಡೆದ ಲಿಖಿತ ಪತ್ರ ಹಾಗೂ ಸ್ಥಾಪನೆಯಾದ ಬಗ್ಗೆ ದೃಢೀಕರಣ.

(ಇ) ಅರ್ಜಿದಾರರು ಆವರಣದ ಮಾಲೀಕರಾಗಿರದಿದ್ದಲ್ಲಿ ನಷ್ಟಭರ್ತಿ ಮುಚ್ಚಳಿಕೆ ಪತ್ರ

(ಎಫ್) ಅರ್ಜಿದಾರರ ಖಾಯಂ ವಿಳಾಸದ ಪುರಾವೆ ಹಾಗೂ ಪಾನ್ ಸಂಖ್ಯೆ(ಇದ್ದಲ್ಲಿ). ನಂತರದ ದಿನಗಳಲ್ಲಿ ಯಾವುದೇ ಬದಲಾವಣೆ ಇದ್ದರೆ, ಅರ್ಜಿದಾರರು ಕೂಡಲೇ ಲೈಸೆನ್ಸುದಾರರ ಗಮನಕ್ಕೆ ತರತಕ್ಕದ್ದು.

(ಜಿ) ತನ್ನ ಕೈಗಾರಿಕೆ/ವಾಣಿಜ್ಯ ಸ್ಥಾಪನದಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಿಲ್ಲ ಎಂದು ವಾಗ್ದಾನ ಪತ್ರ ಹಾಗೂ ಒಂದು ವೇಳೆ ಅಂತಹ ಕೈಗಾರಿಕೆ/ವಾಣಿಜ್ಯ ಸ್ಥಾಪನದಲ್ಲಿ, ಬಾಲಕಾರ್ಮಿಕ(ನಿಷೇಧಾಜ್ಞೆ ಮತ್ತು ವಿನಿಯಮ) ಕಾಯಿದೆ 1986 ಮತ್ತು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಕಾಯಿದೆ 1961ರ ಕಲಮು 24/ಕಾರ್ಖಾನೆ ಕಾಯಿದೆ 1948 **(ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಇಎನ್ 84 ಪಿಎಸ್‌ಆರ್ 2004 / 416, ದಿನಾಂಕ 9/14ನೇ ಜೂನ್ 2004ರ ಪ್ರಕಾರ ಸೇರಿಸಲಾಗಿದೆ)**ನ್ನು ಉಲ್ಲಂಘಿಸಿ ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡರೆ ಸ್ಥಾಪನದ ವಿದ್ಯುತ್ ಸಂಪರ್ಕವನ್ನು ನಿಲ್ಲಿಸಬಹುದೆಂದು ಒಪ್ಪಿಗೆ ಪತ್ರ.

...ಮುಂದುವರಿಯುವುದು

# ಹಬ್ಬ-ರಾಷ್ಟ್ರೀಯ ದಿನಾಚರಣೆ

## ಈದ್-ಉಲ್-ಫಿತರ್ (ಜುಲೈ 29)

ರಂಜಾನ್ ಮಾಸದಲ್ಲಿ ಬರುವ ಈ ಹಬ್ಬಕ್ಕೆ ಈದ್-ಉಲ್-ಫಿತರ್ ಎಂದೇ ಕರೆಯುತ್ತಾರೆ. ಇದು ಇಸ್ಲಾಂ ಧರ್ಮೀಯರ ಪ್ರಮುಖ ಹಬ್ಬಗಳಲ್ಲಿ ಒಂದು. ಇದು ದಾನದ ಹಬ್ಬ. ಒಂದು ತಿಂಗಳವರೆಗೆ ಬಡವ- ಶ್ರೀಮಂತ ಎನ್ನುವ ಭೇದವಿಲ್ಲದೇ ಎಲ್ಲರೂ ಉಪವಾಸದಿಂದಿದ್ದು ಅಲ್ಲಾಹನನ್ನು ಪ್ರಾರ್ಥಿಸುತ್ತಾರೆ. ಬಡತನ ಹಾಗೂ ಹಸಿವು ಏನೆಂಬುದು ಅರಿಯುವ ಸಲುವಾಗಿ ಇಂಥದ್ದೊಂದು ಆಚರಣೆ ರೂಢಿಯಲ್ಲಿ ಬಂದಿದೆ.




ಇಸ್ಲಾಂ ಎಂದೂ ಸಂಪತ್ತಿನ ಕೇಂದ್ರೀಕರಣವನ್ನು ವಿರೋಧಿಸುತ್ತದೆ. ಯಾವತ್ತೂ ಶೀಮಂತನನ್ನು ದಾನ ನೀಡುವುದಕ್ಕೆ ಪ್ರೇರೇಪಿಸುತ್ತದೆ. ಇಸ್ಲಾಮಿನ ಐದು ಪ್ರಧಾನ ಕರ್ಮಗಳಲ್ಲಿ ಒಂದಾದ 'ಝಕಾತ್' ಇದಕ್ಕೆ ಪುಷ್ಟಿ ನೀಡುತ್ತದೆ. ಅದಲ್ಲದೇ ಹಲವಾರು ಪುಣ್ಯ ಕಾರ್ಯಗಳ ಸಂದರ್ಭಗಳಲ್ಲೂ ದಾನ ನೀಡುವುದು ಕಡ್ಡಾಯಗೊಳಿಸುತ್ತದೆ. ಅಂತಹ ಒಂದು ಹಬ್ಬವಾಗಿದೆ ಈದ್-ಉಲ್-ಫಿತರ್. ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದವರು ದೇವಲೀನರಾಗಿ ಎಲ್ಲ ರೀತಿಯ ತಪ್ಪುಗಳಿಂದ ದೂರವಿರುತ್ತಾರೆ.

## ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 15)

ಭಾರತ ದೇಶ 1947ರ ಆಗಸ್ಟ್ 15ರಂದು ಬ್ರಿಟಿಷರಿಂದ ಸ್ವತಂತ್ರ ವಾಯಿತು. ಪ್ರತಿ ವರ್ಷ ಭಾರತಾದ್ಯಂತ ಈ ದಿನವನ್ನು ಸ್ವಾತಂತ್ರ್ಯ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಇದು 67ನೇ ಸ್ವಾತಂತ್ರ್ಯ ವರ್ಷ. ಈ ದಿನ ದೇಶದಾದ್ಯಂತ ರಾಷ್ಟ್ರೀಯ ರಜಾದಿನವನ್ನಾಗಿ ಆಚರಿಸಲಾಗುತ್ತದೆ. ದೇಶದ ಹಲವೆಡೆ ತ್ರಿವರ್ಣ ಧ್ವಜವನ್ನು ಹಾರಿಸಿ ಸಿಹಿ ಹಂಚಲಾಗುತ್ತದೆ.



ಈ ಆಚರಣೆಯ ಪ್ರಮುಖ ಸಮಾರಂಭ ದೆಹಲಿಯ ಕೆಂಪುಕೋಟೆಯಲ್ಲಿ ನಡೆಯುತ್ತದೆ. ಈ ಸಮಾರಂಭದಲ್ಲಿ, ಭಾರತದ ಪ್ರಧಾನ ಮಂತ್ರಿಗಳು ರಾಷ್ಟ್ರಧ್ವಜವನ್ನು ಹಾರಿಸಿ, ರಾಷ್ಟ್ರಗೀತೆ 'ಜನ ಗಣ ಮನ'ವನ್ನು ಹಾಡಿ ನಂತರ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಈ ಭಾಷಣದಲ್ಲಿ, ದೇಶದ ಸಾಧನೆ, ದೇಶದ ಮುಂದಿರುವ ಪ್ರಮುಖ ಸವಾಲುಗಳ ಬಗ್ಗೆ ಮಾತನಾಡಿ, ಕೆಲವು ಪ್ರಗತಿ ಯೋಜನೆಗಳನ್ನು ಪ್ರಕಟಿಸಲಾಗುತ್ತದೆ. ಈ ದಿನದಂದು ರಾಷ್ಟ್ರಪಿತ ಮಹಾತ್ಮಾಗಾಂಧಿ ಸೇರಿದಂತೆ ದೇಶದ ಸ್ವಾತ್ರಂತ್ರ್ಯಕ್ಕೆ ಮಡಿದ ನಾಯಕರನ್ನು ಸ್ಮರಿಸಲಾಗುತ್ತದೆ. ಸ್ವಾತಂತ್ರ್ಯ ದಿನಾಚರಣೆ ಕೇವಲ ಆಚರಣೆಯಾಗದೆ ದೇಶ ಪ್ರೇಮ ಮೂಡಿಸಬಲ್ಲ ಸಾಧನವಾಗಲಿ.

## ಶ್ರೀಕೃಷ್ಣ ಜನ್ಮಾಷ್ಟಮಿ (ಆಗಸ್ಟ್ 17)

ಕೃಷ್ಣ ಹುಟ್ಟಿದ ದಿನವನ್ನು ಕೃಷ್ಣ ಜನ್ಮಾಷ್ಟಮಿ ಅಥವಾ ಗೋಕುಲಾಷ್ಟಮಿ ಎಂದು ವೈಭವದಿಂದ ಆಚರಿಸಲಾಗುತ್ತದೆ. ಶ್ರೀಕೃಷ್ಣನ ಜನ್ಮದಿನವನ್ನು ಚಾಂದ್ರಮಾನ ರೀತಿಯಲ್ಲಿ ಶ್ರಾವಣ ಕೃಷ್ಣ ಅಷ್ಟಮಿಯಂದು, ಸೌರಮಾನ ರೀತಿಯಲ್ಲಿ ಸಿಂಹಮಾಸದ ರೋಹಿಣಿ ನಕ್ಷತ್ರದ ದಿನ ಆಚರಿಸುತ್ತಾರೆ.

ಶ್ರಾವಣ ಮಾಸದಲ್ಲಿ ಬರುವ ಕೃಷ್ಣ ಪಕ್ಷದ ಅಷ್ಟಮಿ ಕೃಷ್ಣನು ಹುಟ್ಟಿದ ದಿನ. ಅಷ್ಟಮಿಯ ಮಧ್ಯರಾತ್ರಿ, ಕಾರಾಗೃಹದಲ್ಲಿ ಕೃಷ್ಣ ಜನನವಾಯಿತೆಂದು ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕೃಷ್ಣಾಷ್ಟಮಿಯ ದಿನದಂದು, ಮನೆ ಮತ್ತು ದೇವಾಲಯಗಳನ್ನು ಸುಂದರವಾಗಿ ಅಲಂಕರಿಸಲಾಗುತ್ತದೆ. ಕೃಷ್ಣನ ಪುಟ್ಟ ಹೆಜ್ಜೆಗಳನ್ನು ರಂಗೋಲಿಯಲ್ಲಿ ಬರೆದು ಸಂಭ್ರಮಿಸಲಾಗುತ್ತದೆ. ಕೃಷ್ಣನ ವಿಗ್ರಹಗಳನ್ನು ವಿಧವಿಧವಾಗಿ ಅಲಂಕರಿಸಿ ಬಗೆಬಗೆಯ ತಿಂಡಿಗಳನ್ನು ಮಾಡಿ ಬಾಲಕೃಷ್ಣನನ್ನು ಪೂಜಿಸಲಾಗುತ್ತದೆ. ಕೆಲವು ಕಡೆ, ಮಧ್ಯರಾತ್ರಿಯವರೆಗೆ ಉಪವಾಸವಿದ್ದು, ನಂತರ ಆಹಾರ ಸ್ವೀಕರಿಸುವ ಸಂಪ್ರದಾಯವಿದೆ. ಉಡುಪಿಯಲ್ಲಿ ಈ ದಿನದಂದು ವಿಶೇಷ ಪೂಜೆಗಳನ್ನು ನಡೆಸಲಾಗುತ್ತದೆ.



## ಗೌರಿ- ಗಣೇಶ ಹಬ್ಬ (ಆಗಸ್ಟ್ 29)

ಪ್ರತಿ ವರ್ಷದ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿ (ಚತುರ್ಥಿ) ದಿನ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದಲ್ಲಿ ಗಣಪತಿಯನ್ನು ಪೂಜಿಸಲಾಗುತ್ತದೆ. ಬೆಳ್ಳಿ ಅಥವಾ ಮಣ್ಣಿನಿಂದ ಮಾಡಿದ ಗಣಪತಿಯ ಮೂರ್ತಿಯನ್ನು ವಿಧ್ಯುಕ್ತವಾಗಿ ಪೂಜಿಸಿ, ವ್ರತವೆಂದು ಆಚರಿಸಲಾಗುತ್ತದೆ. ಹಬ್ಬದ ದಿನ ಮೋದಕ, ಕಡುಬು ಎಂಬ ಸಿಹಿ ತಿಂಡಿಯನ್ನು ಮಾಡಿ ಗಣೇಶನಿಗೆ ನೈವೇದ್ಯ ಮಾಡಲಾಗುತ್ತದೆ.

ದಕ್ಷಿಣ ಭಾರತದಲ್ಲಿ ಮನೆ ಮನೆಗಳಲ್ಲಿ ಗಣಪತಿಯ ಮೂರ್ತಿಗೆ ಪೂಜಿಸಿದರೆ, ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜನಗಳನ್ನು ಒಗ್ಗೂಡಿಸಲು ಆರಂಭಿಸಿದ ಸಾರ್ವಜನಿಕ ಗಣಪತಿ ಪೂಜೆ ಇಂದಿಗೂ ಹಾಗೆಯೇ ಮುಂದುವರೆಯುತ್ತಿದೆ.

ನಮ್ಮ ದೇಶದಲ್ಲಿ ಗಣಪತಿಯ ಪೂಜೆಯು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಆನೆಗಳ ಹಿಂಡು ಹೊಲ ಗದ್ದೆಗಳಿಗೆ ನುಗ್ಗಿ ಬೆಳೆಯನ್ನು ಹಾಳು ಮಾಡುವುದನ್ನು ತಡೆಯುವ ಸಲುವಾಗಿ ರೈತಾಪಿ ಜನಗಳು ಆನೆಯ ಮುಖವುಳ್ಳ ದೇವನನ್ನು ಪೂಜಿಸಿದರೆ, ಗೋದಾಮುಗಳಲ್ಲಿ ಧಾನ್ಯಗಳನ್ನು ತಿಂದು ಹಾಳು ಮಾಡುವ ಇಲಿಗಳನ್ನೂ ಪೂಜಿಸಿ ಇಬ್ಬರನ್ನೂ ಸಮಾಧಾನಿಸುವುದೂ ಹಬ್ಬದ ಒಂದು ಕಾರಣವೆಂದು ಕೆಲವರು ಹೇಳುವರು. ಅದಲ್ಲದೇ ಹೊಲಗಳಲ್ಲಿ ನಿಲ್ಲಿಸುವ ಬೆರ್ಚಪ್ಪನಿಗೂ ಗಣಪತಿಯಂತೆ ಡೊಳ್ಳು ಹೊಟ್ಟೆಯನ್ನು ಮಾಡಿರುತ್ತಾರೆ. ಇದಲ್ಲದೇ ಗಣಪತಿಯನ್ನು ಮ್ಯಾನ್ಮಾರ್, ಮಲೇಶಿಯಾ, ಇಂಡೋನೇಶಿಯಾ, ಚೀನಾ, ಸುಮಾತ್ರಾ, ಜಾವಾ, ಜಾಪಾನ್ ಮತ್ತಿತರ ದೇಶಗಳಲ್ಲಿಯೂ ಪೂಜಿಸುತ್ತಾರೆ.



ಗಣೇಶ ಚತುರ್ಥಿಯ ಮುನ್ನಾದಿನ ಆತನ ತಾಯಿ ಗೌರಿಯನ್ನೂ ಆರಾಧಿಸುವ ಮೂಲಕ ಗೌರಿಹಬ್ಬವನ್ನೂ ಆಚರಿಸಲಾಗುತ್ತದೆ.

## ಮಹಾಲಯ ಅಮಾವಾಸ್ಯೆ (ಸೆಪ್ಟೆಂಬರ್ 23)

ಮಹಾಲಯ ಅಮಾವಾಸ್ಯೆಯನ್ನು ಭಾದ್ರಪದ ಕೃಷ್ಣ ಅಮಾವಾಸ್ಯೆ ಎಂದೂ ಕರೆಯುತ್ತಾರೆ. ಇದು ಪಿತೃ ಪಕ್ಷದ ಕೊನೆಯಲ್ಲಿ ಬರುವುದರಿಂದ ಸರ್ವಪಿತೃ ಅಮಾವಾಸ್ಯೆ ಎಂತಲೂ ಕರೆಯುತ್ತಾರೆ. ಈ ದಿನದಂದು ನಮ್ಮನ್ನು ಅಗಲಿದ ಹಿರಿಯರಿಗೆ ವಂದಿಸಿ, ಅವರಿಗೆ ಇಷ್ಟವಾದ ಪದಾರ್ಥಗಳನ್ನು ಮಾಡಿ ತಿಲ ತರ್ಪಣವನ್ನು, ಜಲ ತರ್ಪಣವನ್ನು, ಬಲಿಯನ್ನು ಹಾಗೂ ಪಿಂಡವನ್ನು ನೀಡಲಾಗುವುದು. ಇದರಿಂದ ನಮ್ಮ ಪಿತೃಗಳು ತೃಪ್ತರಾಗಿ ಮುಂದಿನ ಪೀಳಿಗೆಗೆ ಹೆಚ್ಚಿನ ಸುಖ ಸಂತೋಷಗಳನ್ನು ನೀಡುತ್ತಾರೆ ಎಂಬುದು ನಂಬಿಕೆ.

## ಹಬ್ಬ....

ಕುಂತಿ ಪುತ್ರನಾದ ಕರ್ಣ, ಕೌರವರರ ಪಡೆಯ ಕಡೆ ನಿಂತು, ಪಾಂಡವರ ವಿರುದ್ಧ ಹೋರಾಡಿದನು. ಈ ಯುದ್ಧದಲ್ಲಿ ಕರ್ಣನು ಅರ್ಜುನನಿಂದ ಹತನಾದನು. ಹೀಗೆ ಹತನಾದ ಕರ್ಣನನ್ನು ದೇವದೂತರು ಸ್ವರ್ಗಕ್ಕೆ ಕರೆದು ಕೊಂಡು ಹೋಗುವಾಗ ಕರ್ಣನಿಗೆ ತುಂಬಾ ಹಸಿವಾಗುತ್ತದೆ. ಆದರೆ ಮಾರ್ಗ ಮಧ್ಯದಲ್ಲಿ ಕರ್ಣನಿಗೆ ತಿನ್ನಲು ಏನೂ ಸಿಗುವುದಿಲ್ಲ. ಅವನಿಗೆ ಎಲ್ಲೆಲ್ಲೂ ಬಂಗಾರ, ಬೆಳ್ಳಿ ಮುಂತಾದ ಆಭರಣಗಳೇ ಕಾಣುತ್ತವೆ. ಹಸಿವು ತಾಳಲಾರದೆ ಕರ್ಣನು ಯಮಧರ್ಮನನ್ನು ಕುರಿತು ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ಕರ್ಣನ ಪ್ರಾರ್ಥನೆಗೆ ಯಮನು ಪ್ರತ್ಯಕ್ಷನಾಗಿ ಭಾದ್ರಪದಮಾಸದ ಮಹಾಲಯ ಪಕ್ಷದ ದಿನಗಳಂದು ದಾನವನ್ನು ಮಾಡುವಂತೆ ಹೇಳುತ್ತಾನೆ. ಯಮನ ಆದೇಶದಂತೆ ಕರ್ಣನು ಮತ್ತೆ ಭೂಮಿಗೆ ಹಿಂತಿರುಗಿ ಭಾದ್ರಪದ ಮಾಸದ ಮಹಾಲಯ ಪಕ್ಷದ ದಿನಗಳಂದು ತನ್ನ ಹಿರಿಯರಿಗೆ ಹಾಗೂ ಬಡವರಿಗೆ ಅನ್ನ ಹಾಗೂ ವಸ್ತ್ರದಾನವನ್ನು ಮಾಡುತ್ತಾನೆ. ಇದರಿಂದ ಸಂತುಷ್ಟರಾದ ಪಿತೃಗಳು ಅವನನ್ನು ಹರಸುತ್ತಾರೆ. ಹಿರಿಯರ ಆಶೀರ್ವಾದ ಪಡೆದ ಕರ್ಣನು ಯಾವುದೇ ತೊಂದರೆಯಿಲ್ಲದೇ ಸ್ವರ್ಗಕ್ಕೆ ಹೋಗುತ್ತಾನೆ ಎಂದು ಪುರಾಣಗಳಲ್ಲಿ ಹೇಳಿದೆ. ಈ ಕತೆಯ ಆಧಾರದ ಮೇಲೆ ಪ್ರತಿವರ್ಷವೂ ಮಹಾಲಯ ಅಮಾವಾಸ್ಯೆಗೆ ನಮ್ಮನ್ನು ಅಗಲಿದ ಹಿರಿಯರನ್ನು ತಪ್ತಿಪಡಿಸಲು ಅವರಿಗೆ ಇಷ್ಟವಾದ ಅಡುಗೆಗಳನ್ನು ಹಾಗೂ ವಸ್ತ್ರಗಳನ್ನು ಇಟ್ಟು ಆಶೀರ್ವಾದ ಕೇಳುವ ಆಚರಣೆ ತಲಾತಲಾಂತರಗಳಿಂದ ಪಾಲಿಸಲಾಗುತ್ತಿದೆ. ಈ ಅಮಾವಾಸ್ಯೆಯ ಮಾರನೆ ದಿನದಿಂದ ನಾಡಹಬ್ಬ ದಸರಾದ ಸಡಗರ ಪ್ರಾರಂಭವಾಗುವುದು.

---

### ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

## ದ.ರಾ.ಬೇಂದ್ರೆ

'ಕುಣಿಯೋಣ ಬಾರಾ ಕುಣಿಯೋಣ ಬಾ', 'ಇಳಿದು ಬಾ ತಾಯಿ ಇಳಿದು ಬಾ, 'ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು' ಕವಿತೆಗಳು ಕಾವ್ಯಾಸಕ್ತರ ಮನದಲ್ಲಿ ಮನೆಮಾಡಿವೆ. ನೊಂದ ಜೀವಕ್ಕೆ ಸಾಂತ್ವನ ನೀಡಬಲ್ಲ, ಪ್ರೀತಿ ಪ್ರೇಮಗಳನ್ನು ಮೂಡಿಸಬಲ್ಲ ಇಂಥ ಕವಿತೆಗಳನ್ನು ರಚಿಸಿಕೊಟ್ಟವರು ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಅರ್ಥಾತ್ ದ.ರಾ. ಬೇಂದ್ರೆ.



ಬೇಂದ್ರೆಯವರು 1896ರ ಜನವರಿ 31ರಂದು ಜನಿಸಿದರು. ತಂದೆ ರಾಮಚಂದ್ರ ಭಟ್ಟ, ತಾಯಿ ಅಂಬಿಕೆ (ಅಂಬವ್ವ). ತಾಯಿಯವರ ಹೆಸರನ್ನೇ ಕಾವ್ಯನಾಮವಾಗಿಟ್ಟುಕೊಂಡು 'ಅಂಬಿಕಾತನಯದತ್ತ' ಎಂದು ಪ್ರಸಿದ್ಧಿ ಪಡೆದವರು ಬೇಂದ್ರೆ .

ಬೇಂದ್ರೆ ಮನೆತನದ ಮೂಲ ಹೆಸರು ಠೋಸರ. ವೈದಿಕ ವೃತ್ತಿಯ ಕುಟುಂಬ. ಒಂದು ಕಾಲಕ್ಕೆ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ಗದಗ ಪಟ್ಟಣದ ಸಮೀಪದ ಶಿರಹಟ್ಟಿಯಲ್ಲಿ ಬಂದು ನೆಲೆಸಿದರು. ದ.ರಾ.ಬೇಂದ್ರೆ ಹನ್ನೊಂದು ವರ್ಷದವರಿದ್ದಾಗ ಅವರ ತಂದೆ ತೀರಿ–ಕೊಂಡರು. 1913ರಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿದ ಬಳಿಕ ಬೇಂದ್ರೆ ಪುಣೆಯ ಕಾಲೇಜಿನಲ್ಲಿ ಓದಿ ಬಿ.ಎ.ಪದವಿ ಪಡೆದರು. ಹಿಡಿದದ್ದು ಅಧ್ಯಾಪಕ ವೃತ್ತಿ. 1935ರಲ್ಲಿ ಎಂ.ಎ. ಮಾಡಿಕೊಂಡು ಕೆಲಕಾಲ ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕವಿತೆಗಳನ್ನು ಕಟ್ಟಿದರು. 1918ರಲ್ಲಿ ಅವರ ಮೊದಲ ಕವನ "ಪ್ರಭಾತ" ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅಲ್ಲಿಂದಾಚೆಗೆ ಅವರು ಕಾವ್ಯ ರಚನೆ ಮಾಡುತ್ತಲೇ ಬಂದರು. "ಗರಿ", "ಕಾಮಕಸ್ತೂರಿ", "ಸೂರ್ಯಪಾನ", "ನಾದಲೀಲೆ", "ನಾಕುತಂತಿ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ನಾಕುತಂತಿ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಕೂಡ ದೊರಕಿತು. ಕನ್ನಡ ಸಾಹಿತ್ಯ ರಂಗದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದವರಲ್ಲಿ ಎರಡನೇಯವರು ಬೇಂದ್ರೆ.

ಇವರು 1919ರಂದು ಹುಬ್ಬಳ್ಳಿಯಲ್ಲಿ ಲಕ್ಷ್ಮೀಬಾಯಿಯವರನ್ನು ವಿವಾಹವಾದರು. ಅವರ ಪ್ರಥಮ ಕಾವ್ಯ ಸಂಕಲನ "ಕೃಷ್ಣ ಕುಮಾರಿ" ಆಗಲೇ ಪ್ರಕಟಗೊಂಡಿತು. ನಂತರ ಹಲವಾರು ಕವಿತೆಗಳ ಮೂಲಕ ಜನಮನ ಗೆದ್ದರು. ನಾಡಿನ ತುಂಬೆಲ್ಲಾ ನಡೆದಾಡಿದ ಅವರಲ್ಲಿರುವಂತ ಪ್ರತಿಯೊಂದು ಸಾಹಿತ್ಯದ ನುಡಿಗಳು ಮಾನವನ ನಾಡಿ ಮಿಡಿತದಂತೆ ಹರಿದಾಡಿ ಇಡೀ ಕನ್ನಡ ಸಾಹಿತ್ಯ ರಂಗವನ್ನೇ ಶ್ರೀಮಂತಗೊಳಿಸಿವೆ. ಇವರು 1981ರ ಅಕ್ಟೋಬರ್‌ನಲ್ಲಿ ಕಾಲವಾದರು. ಅವರು ಕವಿಗಳಿಗೆ, ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಎಲ್ಲಾ ಕಾಲಕ್ಕೂ ಪ್ರಸ್ತುತವಾಗುವಂತಹ ಕವನಗಳನ್ನು ರಚಿಸಿದ ಕೀರ್ತಿ ಅವರದ್ದು.



### ಹುಟ್ಟುಹಬ್ಬದ ಶುಭಾಶಯಗಳು

2014ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗಾಗಿ ಶ್ರಮಿಸಿ 2014ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದಿದ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ವತಿಯಿಂದ ಭಾವಪೂರ್ಣ ಅಭಿನಂದನೆ ಹಾಗೂ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**

# ಕಳೆದ ತ್ರೈಮಾಸಿಕದಲ್ಲಿ ಬೆಸ್ಕಾಂನಲ್ಲಿ ಆಯೋಜಿಸಿದ ಪ್ರಮುಖ ಕಾರ್ಯಕ್ರಮಗಳು






ಗ್ರೀನ್ ಸಮಿಟ್–2104 ಸಮ್ಮೇಳನದಲ್ಲಿ ಬೆಸ್ಕಾಂ ಮಳಿಗೆಯನ್ನು ರಾಜಸ್ಥಾನದ ಘನ ರಾಜ್ಯಪಾಲರಾದ ಶ್ರೀಮತಿ ಮಾರ್ಗರೆಟ್ ಆಳ್ವಾ ಉದ್ಘಾಟಿಸಿದರು.



ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ನಿರ್ಮಿಸಲಾಗುತ್ತಿರುವ ಡಿ.ಎ.ಎಸ್. ಕಟ್ಟಡದ ಭೂಮಿಪೂಜೆ.







ಲೈನ್‌ಮನ್ ನೇಮಕಾತಿಯ ದೈಹಿಕ ಪರೀಕ್ಷೆ ವೇಳೆ ಮಹಿಳಾ ಅಭ್ಯರ್ಥಿಯೊಬ್ಬರು ಕಂಬ ಏರುತ್ತಿರುವುದು.

## ಬೆಸ್ಕಾಂ ಆಯೋಜಿಸಿದ್ದ ಕಾರ್ಟೂನ್ ಸ್ಪರ್ಧೆಯ ಆಯ್ದ ಚಿತ್ರಗಳು








## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎಚ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಶೇಖರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ವಿ.ಎಸ್. ಬಿದರಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ವಿ.ಜಿ. ಪಂಡಿತ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಜೆ. ಲೋಕೇಶ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |

## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:

**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬೆವಿಕಂ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **besommagazine@gmail.com**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 9243150000 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806